**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ**:- ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಡಿ ಲಭ್ಯವಿರುವ 02 ಎಕರೆ ನಿವೇಶನವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸುವ ಕುರಿತು.

***

**ಓದಲಾಗಿದೆ:**- ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ವ್ಯನಿ/ಕೃಭಾಜನಿನಿ/ತಾಂತ್ರಿಕ-3/18/2019-20/2250, ದಿನಾಂಕ:09.11.2020.

**ಪ್ರಸ್ತಾವನೆ:-**

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ರವರ ಪತ್ರದಲ್ಲಿ ಬಾಗಲಕೋಟೆ ಪಟ್ಟಣದ ವ್ಯಾಪ್ತಿಗೆ ಒಳಪಡುವ ಗದ್ದನಕೇರಿ ತಾಂಡಾದಲ್ಲಿನ ಶ್ರೀ ದುರ್ಗಾದೇವಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ 06 ಎಕರೆ ಜಮೀನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ್ದು, ಎಫ್.ಆರ್.ಎಲ್. 523+100ಮೀ. ವ್ಯಾಪ್ತಿಯಲ್ಲಿ ಬಾಧಿತಗೊಳ್ಳುವ ಸಂತ್ರಸ್ಥರಿಗಾಗಿ ಯುನಿಟ್-2 ರಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿರುತ್ತದೆ. ಪ್ರಸ್ತುತ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಧಿತಗೊಳ್ಳುವ ಸಂತ್ರಸ್ಥರಿಗೆ ಅಲ್ಲಿ ನಿವೇಶನ ಹಂಚಿಕೆ ಮಾಡುವ ಕಾರ್ಯ ಕೈಗೊಳ್ಳಬೇಕಾಗಿರುತ್ತದೆ ಎಂದು ವರದಿ ಮಾಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ ಇವರು ದಿನಾಂಕ:15/10/2015ರ ಪತ್ರದಲ್ಲಿ ಬಾಗಲಕೋಟೆ ನಗರದ ಗದ್ದನಕೇರಿ ತಾಂಡಾದಲ್ಲಿನ ಶ್ರೀ ದುರ್ಗಾದೇವಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ 06 ಎಕರೆ ಜಮೀನನ್ನು ಬಂಜಾರ ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರು ಮಾಡಲು ಅಧ್ಯಕ್ಷರು, ಬಿ.ಟಿ.ಡಿ.ಎ. ಬಾಗಲಕೋಟೆ ಇವರನ್ನು ಕೋರಿರುವುದಾಗಿ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಮುಖ್ಯ ಇಂಜಿನಿಯರ್, ಬಿ.ಟಿ.ಡಿ.ಎ. ರವರು ದಿನಾಂಕ:15.09.2016ರ ಪತ್ರದಲ್ಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆಯಲ್ಲಿ ಇರುವ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ವಿನಾಯಿತಿ ದರದಲ್ಲಿ ಹಂಚಿಕೆ ಮಾಡುವ ಕುರಿತು ಬಿಟಿಡಿಎ ಬೋರ್ಡ್ ನಲ್ಲಿ ನಿಲುವಳಿಗಳನ್ನು ಈ ಕೆಳಗಿನಂತೆ ತಿಳಿಸಿರುತ್ತಾರೆ:

- ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಸರ್ಕಾರದ ನಿಗಮವಾಗಿರುವುದರಿಂದ, 2016ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಿರುವುದರಿಂದ ಹಾಗೂ ಈಗಾಗಲೇ ತಾಂಡಾ ಅಭಿವೃದ್ಧಿ ನಿಗಮಕ್ಕೆ ರೂ.3.00 ಕೋಟಿ ಅನುದಾನ ಲಭ್ಯವಾಗಿರುವುದರಿಂದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಗದ್ದನಕೇರಿ ತಾಂಡಾ ಹತ್ತಿರ ಸಮುದಾಯ ಭವನ ಮತ್ತು ತರಬೇತಿ ಕೇಂದ್ರ ನಿರ್ಮಾಣ ಮಾಡಲು 02 ಎಕರೆ ಜಮೀನನ್ನು ಹಂಚಿಕೆ ಮಾಡಲು ದಿನಾಂಕ:20.10.2015ರಂದು ಜರುಗಿದ 122ನೇ ಬಿಟಿಡಿಎ ಬೋರ್ಡ್ ಸಭೆಯಲ್ಲಿ ನಿಲುವಳಿ ಆಗಿರುತ್ತದೆಂದು ತಿಳಿಸಿರುತ್ತಾರೆ.
- ದಿನಾಂಕ:06/04/2016ರಂದು ಜರುಗಿದ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 124ನೇ ಸಭೆಯಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ನಿರ್ಮಿಸಲು ಉದ್ದೇಶಿಸಿರುವ ಬಂಜಾರ ಭವನ, ಸಿಬ್ಬಂದಿ ವಸತಿ ಗೃಹ, ಮಹಿಳಾ ಹಾಸ್ಟೆಲ್, ಅತಿಥಿ ಗೃಹ, ಉತ್ಪಾದನೆ ಘಟಕಗಳು, ಆಡಳಿತ ಕಛೇರಿ ಮತ್ತು ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕಾಗಿ ಇನ್ನು 02 ಎಕರೆ ಯಂತೆ ಒಟ್ಟು 4 ಎಕರೆ ಜಮೀನನ್ನು ಹಂಚಿಕೆ ಮಾಡಲು ತೀರ್ಮಾನಿಸಿ ನಡವಳಿ ಆಗಿರುತ್ತದೆ ತಿಳಿಸಿರುತ್ತಾರೆ.

ಕೃಷ್ಣಾ ಭಾಗ್ಯ ಜಲ ನಿಗಮದ ದಿನಾಂಕ:23.01.2020ರ ಪತ್ರದಲ್ಲಿ ಕೋರಿರುವಂತೆ ಮುಖ್ಯ ಇಂಜಿನಿಯರ್, ಬಿ.ಟಿ.ಡಿ.ಎ. ಇವರು ದಿನಾಂಕ:09/03/2020ರ ಪತ್ರದಲ್ಲಿ ನವನಗರದ ಗದ್ದನಕೇರಿ ತಾಂಡದಲ್ಲಿರುವ ಶ್ರೀ ದುರ್ಗಾದೇವಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ 04 ಎಕರೆ ಜಾಗದ ಬದಲಾಗಿ ಲಭ್ಯವಿರುವ 02 ಎಕರೆ ನಿವೇಶನವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ನೀಡಬಹುದು ಎಂದು ಅಭಿಪ್ರಾಯಿಸಿ, ಹಿರಿಯ ಉಪ ನೋಂದಣಿ ಅಧಿಕಾರಿ, ಬಾಗಲಕೋಟೆ ಇವರಿಂದ ಪಡೆದ

ಮಾರ್ಗಸೂಚಿ ಮೌಲ್ಯದ ದರಪಟ್ಟಿಯನ್ವಯ ಪ್ರತಿ ಚದರ ಮೀಟರ್ ಗೆ ರೂ.2,000/- ಇದ್ದು, ಲೆಕ್ಕಾಚಾರ ಮಾಡಲಾಗಿ 8093.64 ಚ.ಮೀ X 2000=ರೂ.161.88ಲಕ್ಷ ಆಗುತ್ತದೆ ಎಂದು ವರದಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ:05/10/2020ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮದ 126ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ ಎಂದು ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಕೃಷ್ಣಾ ಭಾಗ್ಯ ಜಲ ನಿಗಮದ ನಿರ್ದೇಶಕರ ಮಂಡಳಿಯು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಲಭ್ಯವಿರುವ 02 ಎಕರೆ ನಿವೇಶನವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಬಂಜಾರ ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಲು ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ಸರ್ಕಾರದ ಕಂದಾಯ ಇಲಾಖೆಯ ಸುತ್ತೋಲೆಗಳ ಷರತ್ತು ಮತ್ತು ನಿಬಂಧನೆಗಳನ್ವಯ ಜಲ ಸಂಪನ್ಮೂಲ ಇಲಾಖೆ ಮೂಲಕ ಕಂದಾಯ ಇಲಾಖೆಯ ಸಹಮತಿ ಪಡೆದು ಒಂದಾವರ್ತಿಯಾಗಿ ಮೊತ್ತವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಭರಿಸಿಕೊಂಡು ನಿವೇಶವನ್ನು ಹಸ್ತಾಂತರಿಸಲು ಮಂಡಳಿ ಸಭೆಯು ಅನುಮೋದಿಸಿರುತ್ತದೆ ಎಂದು ವರದಿ ಮಾಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಇವರು ನಿಗಮದ ನಿರ್ದೇಶಕರ ಮಂಡಳಿಯ ಶಿಫಾರಸ್ಸಿನಂತೆ, ಸರ್ಕಾರದ ಕಂದಾಯ ಇಲಾಖೆಯ ಸುತ್ತೋಲೆಗಳ ಷರತ್ತು ಮತ್ತು ನಿಬಂಧನೆಗಳನ್ವಯ ಜಲ ಸಂಪನ್ಮೂಲ ಇಲಾಖೆ ಮೂಲಕ ಕಂದಾಯ ಇಲಾಖೆಯ ಸಹಮತಿ ಪಡೆದು , ಮುಖ್ಯ ಇಂಜಿನಿಯರ್, ಬಿಟಿಡಿಎ, ಬಾಗಲಕೋಟೆ ಇವರು ಹಿರಿಯ ಉಪ ನೋಂದಣಿ ಅಧಿಕಾರಿ, ಬಾಗಲಕೋಟೆ ಇವರಿಂದ ಪಡೆದ ಮಾರ್ಗಸೂಚಿ ಮೌಲ್ಯದ ದರಪಟ್ಟಿಯನ್ವಯ ಪ್ರತಿ ಚದರ ಮೀಟರ್ ಗೆ ರೂ.2,000/- ರಂತೆ ಒಟ್ಟು 02 ಎಕರೆ ಜಮೀನಿಗೆ ಲೆಕ್ಕಾಚಾರ ಮಾಡಿದ ಮೊತ್ತ ರೂ.161.88 ಲಕ್ಷಗಳನ್ನು ಒಂದಾವರ್ತಿಯಾಗಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಭರಿಸಿಕೊಂಡು 02 ಎಕರೆ ನಿವೇಶನವನ್ನು ಹಸ್ತಾಂತರಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಇ-ಸಂಖ್ಯೆ:ಜಸಂಇ 210 ಕೆಬಿಎನ್ 2020, ಬೆಂಗಳೂರು, ದಿನಾಂಕ: 05.02.2022**

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಲಭ್ಯವಿರುವ 02 ಎಕರೆ ನಿವೇಶನವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಬಂಜಾರ ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಲು ಹಿರಿಯ ಉಪ ನೋಂದಣಿ ಅಧಿಕಾರಿ, ಬಾಗಲಕೋಟೆ ಇವರಿಂದ ಪಡೆದ ಮಾರ್ಗಸೂಚಿ ಮೌಲ್ಯದ ದರಪಟ್ಟಿಯನ್ವಯ ಪ್ರತಿ ಚದರ ಮೀಟರ್ ಗೆ ರೂ.2,000/- ರಂತೆ ಒಟ್ಟು 02 ಎಕರೆ ಜಮೀನಿಗೆ ಲೆಕ್ಕಾಚಾರ ಮಾಡಿದ ಮೊತ್ತ ರೂ.161.88 ಲಕ್ಷಗಳನ್ನು ಒಂದಾವರ್ತಿಯಾಗಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಭರಿಸಿಕೊಂಡು 02 ಎಕರೆ ನಿವೇಶನವನ್ನು ಹಸ್ತಾಂತರಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂ. ಆರ್.ಡಿ. 32 ಎಲ್.ಜಿ.ಪಿ 2019, ದಿನಾಂಕ:01.02.2021 ಮತ್ತು ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ: ಕಂಇ 9 ಎಲ್.ಜಿ.ಜೆ. 2021 ದಿನಾಂಕ: 22.10.2021ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

5/2/2022
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

4. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ., ಬೆಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
6. ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ನವನಗರ, ಬಾಗಲಕೋಟೆ.
8. ಹೆಚ್ಚುವರಿ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿನಿ), ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.